

ಬಿಳಿಗಿರಿರಂಗನ ಬೆಟ್ಟದ ವಿಶೇಷ ಎಂದರೆ ಇಲ್ಲಿ ಎಲ್ಲಾ ಬಗೆಯ ಕಾಡುಗಳೂ ಸಿಗುತ್ತವೆ. ಮಲ್ಕಿ ಬೆಟ್ಟಕ್ಕೆ ಚಾರಣ ಹೊರಟರೆ ಹೊಸಪೋಡಿನ ಸಮೀಪ ದಟ್ಟವಾದ ಕಾಡು ಎದುರಾಗುತ್ತದೆ. ಮುಂದೆ ಹೋದಂತೆ ಮತ್ತೂ ದಟ್ಟವಾಗುವ ಕಾಡು ಮಲ್ಕಿ ಬೆಟ್ಟದ ಬುಡಕ್ಕೆ ಬಂದಕೂಡಲೆ ಏಕಾಏಕಿ ಹಸಿರು ಹುಲ್ಲಿನ ಚಾಪೆಯಾಗಿ ಹರಡಿಕೊಳ್ಳುತ್ತದೆ. ಕಾಡು ಮುಗಿದೇ ಹೋಯಿತಲ್ಲ ಎನ್ನುವಷ್ಟರಲ್ಲೆ ಮತ್ತೆ ಹೆಮ್ಮರಗಳು ಪ್ರಾರಂಭವಾಗುತ್ತವೆ. ಈ ಏರಿಳಿತಗಳು ಇತ್ತೀಚೆಗೆ ಮೈತಾಳಿದ ವಿದ್ಯಮಾನವಲ್ಲ. ಅನಾದಿಕಾಲದಿಂದಲೂ ಈ ಕಾಡು ಇರುವುದೇ ಹೀಗೆ. ನಿತ್ಯ ಹರಿದ್ವರ್ಣದ ಕಾಡು, ಎಲೆಯುದುರು ಕಾಡು, ಕುರುಚಲು ಕಾಡು, ಕಡೆಗೆ ಹುಲ್ಲುಗಾವಲು ಕೂಡ ಈ ಬೆಟ್ಟದ ಸಾಲುಗಳು ಉಸುರುವ 'ಅನಂತತೆಯ ತೊದಲಿನ' ಪರಿಭಾಷೆ. ಮರಗಳಿಗೇ ಸವಾಲೆಸೆಯುತ್ತ ತೂಗಿ ಬಿದ್ದಿರುವ ಹೆಬ್ಬಳ್ಳಿಗಳು, ಕಾನನ ಕವಿ ಕುವೆಂಪು ಹೇಳುವಂತೆ, 'ಕಾನನಕ್ಲೇಶ ಯಾತ್ರೆಯಿಂದ ದಣಿದು ಬಂದ ನೀರನಿದ್ರೆಗೆ ಪ್ರಕೃತಿರಮೆ ರಚಿಸಿದ ಮಂಚ'ದಂತೆ ಅಲ್ಲಲ್ಲೆ ನಿಂತಿರುವ ತಿಳಿನೀರಿನ ಕೊಳಗಳು, ಬಣ್ಣ ಬಣ್ಣದ ಪಕ್ಷಿಗಳು ಹೀಗೆ ಚಾರಣದ ಪ್ರತಿ ಕ್ಷಣವನ್ನೂ ವರ್ಣಮಯವಾಗಿ ಮಾಡುವ, ಮನಸ್ಸಿಗೆ ಮುದ ನೀಡುವ ಈ ಕಾಡಿನ ಕೊಡುಗೆ ಅವರ್ಣನೀಯ.

ಈ ಸೌಂದರ್ಯೋಪಾಸನೆ ಒಂದು ಕಡೆ ಇರಲಿ! ಸೌಂದರ್ಯ ಕಣ್ಣು ತುಂಬೀತು! ಹಸಿದ ಹೊಟ್ಟೆಯನ್ನು ತುಂಬೀತೆ ಎಂದು ನೀವು ಕೇಳಬಹುದು. ಕಾಡೇ ಈ ಪ್ರಶ್ನೆಗೂ ಉತ್ತರ ಕೊಡುತ್ತದೆ; ಗೊಟ್ಟಿ ಹಣ್ಣು, ನೇರಳೆ ಹಣ್ಣು, ಅಲಿಗೆ ಹಣ್ಣು, ಸೀಬೆ ಹಣ್ಣು, ಸಾಗಡೆ ಹಣ್ಣು, ಕಾರೆ ಹಣ್ಣು, ಅತ್ತಿ ಹಣ್ಣು ಹೀಗೆ ನಾನಾ ಬಗೆಯ ಹಣ್ಣುಗಳಿವೆ. ನೋಡಲು ನಮಗೆ ಕಣ್ಣಿರಬೇಕಷ್ಟೆ! ಅರಣ್ಯವಾಸಿ ಸೋಲಿಗರಿಗಂತೂ ಇದೆ. ಅವರು ಕೊಡುವ ಕಾಡು ಹಣ್ಣುಗಳ ಪಟ್ಟಿ ನಮ್ಮ ಪದಕೋಶದಲ್ಲೇ ಇಲ್ಲ. ಆದರೆ, ಕಾಡಿನಲ್ಲಿ ನಡೆಯುವ ಪ್ರತಿಯೊಂದು ಆಸೆಗಣ್ಣಿಗೆ ಕಂಡರೂ ಕೈಗೆಟುಕದ 'ಕಾಡಿನ ಖಾದ್ಯ' ಎಂದರೆ ಹೆಜ್ಜೇನು. ಅದರಲ್ಲೂ ವಿಶೇಷವಾಗಿ ನೀರಹಳ್ಳಗಳ ಇಕ್ಕೆಲಗಳಲ್ಲೂ ಅತಿ ಎತ್ತರದಲ್ಲಿ ಮರದ ಕೊಂಬೆಗಳಿಂದ ತುಯ್ಯುವ ಹೆಜ್ಜೇನು ಸ್ವರ್ಗದ ಕನಸಿನಂತೆ ಅಲಭ್ಯ! ಆ ಎತ್ತರಕ್ಕೆ ಏರಿ, ಲಕ್ಷಾಂತರ ಜೇನುಹುಳುಗಳನ್ನು ನಿಭಾಯಿಸಿ ಜೇನುತುಪ್ಪ ಸಂಗ್ರಹಿಸುವುದು ಗರುಡ ಸ್ವರ್ಗದಿಂದ ಅಮೃತ ತಂದಷ್ಟೇ ಕಷ್ಟ! ಆದರೆ, ಸೋಲಿಗರು ಲೀಲಾಜಾಲವಾಗಿ ಜೇನು ಕೀಳುತ್ತಾರಲ್ಲ ಹೇಗೆ? ನನಗೆ ಬಹಳ ಕಾಲದಿಂದಲೂ ಕಾಡುತ್ತಿದ್ದ ಪ್ರಶ್ನೆ ಇದು. ಒಂದು ಜೇನು ಕುಟುಕಿದರೂ ಮೈಗೆಲ್ಲ ಬೆಂಕಿ ಬಿದ್ದಂತಾಗುತ್ತದೆ. ಗೂಡಿನ ಸಾವಿರಾರು ಜೇನುಗಳು ಸೇರಿ ಕುಟುಕಿದರೆ ಗತಿ ಏನು? ಪಟ್ಟಣಿಗರಾದ ನಾವು ಇದನ್ನು ಊಹಿಸಿದರೂ ಸಾಕು, ಸದ್ಯ ಜೇನು ಸಿಹಿಯ ಸಹವಾಸವೇ ಬೇಡ ಎಂದು ಮೈಲುದೂರ ಓಡಿಹೋದೇವು. 'ಜೇನು ಕಡಿತದಿಂದ ಸಾವು' ಎಂಬ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದ ನಾನಂತೂ ಭಯ ಭೀತನಾಗಿ ಜೇನುಗಳನ್ನು ಸಿಟ್ಟಿಗೆಬ್ಬಿಸುವ ಯಾವ ಕೆಲಸವನ್ನೂ ಮಾಡಕೂಡದೆಂಬ